

ಆಲ್‌ರೌಂಡರ್ ಆಗಿ ಭರವಸೆ ಮೂಡಿಸುತ್ತಿರುವ ಅರ್ಷದೀಪ್ ಸಿಂಗ್

2018–19ರಲ್ಲಿ ಮಧ್ಯಪ್ರದೇಶದ ಪರವಾಗಿ ಪ್ರಥಮ ದರ್ಜೆ ಪಂದ್ಯವನ್ನಾಡಿದ್ದರು. ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ 51.66ರ ಬ್ಯಾಟಿಂಗ್ ಸರಾಸರಿಯಲ್ಲಿ 155 ರನ್ ಗಳಿಸಿದ್ದರು. ಇದೇ ಬ್ಯಾಟಿಂಗ್ 2021–22ರ ವಿಜಯ ಹಜಾರೆ ಟೂರ್ನಿಯಲ್ಲಿಯೂ ಮುಂದುವರೆಸಿ, 63.16ರ ಸರಾಸರಿಯಲ್ಲಿ ಒಟ್ಟು 379 ರನ್ ಹೊಡೆದಿದ್ದರು.

ಇವುಗಳ ಫಲವಾಗಿ ಐಪಿಎಲ್‌ನಲ್ಲಿ ಅವಕಾಶ ಲಭಿಸಿ ಪದಾರ್ಪಣೆಯ ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದರು. 2023ರಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ 51 ಎಸೆತಗಳಲ್ಲಿ 104 ರನ್ ಗಳಿಸಿದ್ದರು.

## ಅರ್ಷದೀಪ್ ಸಿಂಗ್

ಎಡಗೈ ಬ್ಯಾಟ್ಸ್‌ಮನ್ ಹಾಗೂ ಎಡಗೈ ಮಧ್ಯಮವೇಗಿ ಬೌಲರ್ ಆಗಿರುವ ಮಧ್ಯಪ್ರದೇಶದ ಅರ್ಷದೀಪ್ ಸಿಂಗ್ ಐಪಿಎಲ್‌ನಲ್ಲಿ ಒಟ್ಟು 65 ಪಂದ್ಯಗಳಿಂದ 76 ವಿಕೆಟ್‌ಗಳನ್ನು ಉರುಳಿಸಿದ್ದಾರೆ. ಅವರನ್ನು ಪಂಜಾಬ್ ಕಿಂಗ್ಸ್ ತಂಡ ₹18 ಕೋಟಿಗೆ ಖರೀದಿಸಿದೆ. 26 ವರ್ಷದ ಅರ್ಷದೀಪ್ ಅವರ ತಂದೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯಲ್ಲಿ ಕೆಲಸ ಮಾಡುತ್ತಿದ್ದರು. 2015ರಲ್ಲಿ ವೃತ್ತಿಪರ ತರಬೇತಿ ಆರಂಭಿಸಿ ದೇಶೀ ಕ್ರಿಕೆಟ್‌ನಲ್ಲಿ ಮಿಂಚಿದರು.

2018ರಲ್ಲಿ 23 ವರ್ಷದ ಒಳಗಿನವರ ಸಿ.ಕೆ. ನಾಯ್ಡು ಟೂರ್ನಿಯಲ್ಲಿ ರಾಜಸ್ಥಾನ ವಿರುದ್ಧದ ಪಂದ್ಯದಲ್ಲಿ ಹ್ಯಾಟ್ರಿಕ್ ಸೇರಿದಂತೆ ಎಂಟು ವಿಕೆಟ್‌ಗಳನ್ನು ಪಡೆದಿದ್ದರು. ಅದೇ ವರ್ಷ ಪ್ರಥಮ ದರ್ಜೆ ಮಾದರಿಗೆ ಪದಾರ್ಪಣೆ ಮಾಡಿದರು. ದೇಶೀ ಟೂರ್ನಿಯಲ್ಲಿ ತೋರಿದ ಸಾಧನೆ ಐಪಿಎಲ್ ಪ್ರವೇಶಕ್ಕೆ ರಹದಾರಿ ಮಾಡಿಕೊಟ್ಟಿತು. ಐಪಿಎಲ್‌ನಲ್ಲಿ ಅವಕಾಶ ಸಿಕ್ಕ ಮೊದಲ ವರ್ಷದಲ್ಲಿಯೇ ಮೂರು ಪಂದ್ಯಗಳಿಂದ ಮೂರು ವಿಕೆಟ್‌ಗಳನ್ನು ಪಡೆದರು. ಆ ವರ್ಷ ಭವಿಷ್ಯದ ಸ್ಟಾರ್ ಆಟಗಾರ ವಿಶೇಷ ಬಹುಮಾನವನ್ನೂ ಪಡೆದರು. 2019ರಲ್ಲಿ ಬಾಂಗ್ಲಾದೇಶದಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಭಾರತ ತಂಡದಲ್ಲಿ ಅವಕಾಶ ಪಡೆದರು. ಐಪಿಎಲ್ ಬ್ಯಾಟ್ಸ್‌ಮನ್‌ಗಳ ಆಟ ಎನಿಸಿದರೂ ಬೌಲಿಂಗ್ ಚಳಕದಿಂದಲೂ ಯಶಸ್ಸು ಸಾಧಿಸಬಹುದು ಎನ್ನುವುದನ್ನು ಅರ್ಷದೀಪ್ ತೋರಿಸಿಕೊಟ್ಟರು.

## ಯಜುವೇಂದ್ರ ಚಾಹಲ್

ಭಾರತದ ಹೆಸರಾಂತ ಸ್ಪಿನ್ನರ್‌ಗಳಲ್ಲಿ ಒಬ್ಬರಾದ ಹರಿಯಾಣದ ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರನ್ನು ಪಂಜಾಬ್ ಕಿಂಗ್ಸ್ ತಂಡ ₹18 ಕೋಟಿಗೆ ಖರೀದಿಸಿದೆ. 2013ರಿಂದ ಐಪಿಎಲ್ ಟೂರ್ನಿಗಳಲ್ಲಿ ಆಡುತ್ತಿರುವ ಚಾಹಲ್ 160 ಪಂದ್ಯಗಳಿಂದ 205 ವಿಕೆಟ್‌ಗಳನ್ನು ಕಬಳಿಸಿದ್ದಾರೆ. ವಿಭಿನ್ನ ಬೌಲಿಂಗ್ ಕೌಶಲ ಹೊಂದಿರುವ ಚಾಹಲ್ ಅವರು ಮೊದಲು ಮುಂಬೈ ಇಂಡಿಯನ್ಸ್, ಬಳಿಕ ಆರ್‌ಸಿಬಿ ತಂಡದಲ್ಲಿ ಆಡಿದ್ದರು. 2014ರಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್ ವಿರುದ್ಧದ ಪಂದ್ಯದಲ್ಲಿ ಪಂದ್ಯ ಶ್ರೇಷ್ಠ ಗೌರವ ಪಡೆದಿದ್ದರು. ಹಂತಹಂತವಾಗಿ ಚಾಹಲ್ ಏರಿದ ಸಾಧನೆಯ ಏಣಿ ಅವರಿಗೆ ಈಗ ದೊಡ್ಡ 'ಬೆಲೆ' ತಂದುಕೊಟ್ಟಿದೆ.

ಇದು ಈ ಸಲದ ಐಪಿಎಲ್‌ನಲ್ಲಿ ಹೆಚ್ಚು ಹಣ ಪಡೆದ ಅಗ್ರ ಐದು ಆಟಗಾರರಾದರೂ, ಗುಜರಾತ್ ಟೈಟನ್ಸ್ ತಂಡದ ಜಾಸ್ ಬಟ್ಲರ್ (₹15.75 ಕೋಟಿ), ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿರುವ ಕನ್ನಡಿಗ ಕೆ.ಎಲ್. ರಾಹುಲ್ (₹14 ಕೋಟಿ), ಮುಂಬೈ ಇಂಡಿಯನ್ಸ್‌ನ ಟ್ರೆಂಟ್ ಬೌಲ್ಟ್ (₹12.5 ಕೋಟಿ), ರಾಜಸ್ಥಾನ ರಾಯಲ್ಸ್‌ನ ಜೋಫ್ರಾ ಆರ್ಚರ್ (₹12.5 ಕೋಟಿ) ಮತ್ತು ಆರ್‌ಸಿಬಿಯ ಜೋಶ್ ಹ್ಯಾಜಲ್‌ವುಡ್ (₹12.5 ಕೋಟಿ) ದಾಖಲೆ ಬೆಲೆಗೆ ಮಾರಾಟವಾದವರ ಸಾಲಿನಲ್ಲಿದ್ದಾರೆ.



ಯಜುವೇಂದ್ರ ಚಾಹಲ್